O.S.No. 214/2017
PW - 1

ದಿನಾಂಕ 10.06.2025 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು : ಪ್ರತಿವಾದಿ ಪರ ವಕೀಲರಿಂದ :-**

1. ಸರೋಜಮ್ಮ ನನ್ನ ತಾಯಿ. ನನ್ನ ತಾಯಿ ಚೆನ್ನಾಗಿಯೇ ಇದ್ದಾರೆ ಎಂದರೆ ಸಾಕ್ಷಿಯು ಅವರು ವಿಲ್ ಚೇರಿನಲ್ಲಿ ಓಡಾಡುವ ಸ್ಥಿತಿಯಲ್ಲಿ ಇದ್ದಾರೆ ಎಂದು ನುಡಿಯುತ್ತಾರೆ. ದಾವೆ ಹಾಕುವ ಸಂದರ್ಭದಲ್ಲಿ ನನ್ನ ತಾಯಿ ಚೆನ್ನಾಗಿಯೇ ಇದ್ದರು ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಅಂಶಗಳ ಬಗ್ಗೆ ನನಗೆ ಗೊತ್ತಿರುತ್ತದೆ. ಅದನ್ನು ನಾನೇ ಹೇಳಿ ಬರೆಸಿರುತ್ತೇನೆ ಎಂದರೆ ಸರಿ. ನಾವು ಕರಿಗೌಡರ ಮಗ ಕೃಷ್ಣ ಇವರ ವಿರುದ್ದ ದಾವೆ ಹಾಕಿರುತ್ತೇವೆ. ಸರ್ವೆ ನಂ.111/2002 ವಿಸ್ತೀರ್ಣ 1 ಎಕರೆ 34 ಗುಂಟೆ ಇದರ ಸಂಬಂಧ ದಾವೆ ಹಾಕಿರುತ್ತೇವೆ. ಸದರಿ ದಾವಾ ಆಸ್ತಿ ಪಿತ್ರಾರ್ಜಿತ ಸ್ವತ್ತು ಆಗಿರುತ್ತದೆ. ನನ್ನ ತಂದೆಯವರ ಹೆಸರಿನಲ್ಲಿ ಆಗಲೀ ಅಥವಾ ತಾತನವರ ಹೆಸರಿನಲ್ಲಿ ಆಗಲೀ ದಾವಾ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ರೆವಿನ್ಯೂ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ.

2. ನನ್ನ ತಂದೆಯ ಹೆಸರಿನಲ್ಲಿ ಯಾವುದೇ ರೆವಿನ್ಯೂ ದಾಖಲೆಗಳು ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇವೆ ಎಂದು ನುಡಿಯುತ್ತಾರೆ. ನಿಪಿ-1 ಇದನ್ನು ಕೃಷ್ಣೆ ಗೌಡರು ಸಲ್ಲಿಸಿದ್ದರು ಎಂದರೆ ಸಾಕ್ಷಿಯು ಅದು ಸರಿಯಲ್ಲ ಅದನ್ನು ನಾವೇ ಸಲ್ಲಿಸಿರುತ್ತೇವೆ ಎಂದು ನುಡಿಯುತ್ತಾರೆ. ನಿಪಿ-1 ರ ಪ್ರಕಾರ ಅದರಲ್ಲಿ ನಮೂದಿಸಿರುವ ಅಂಶದ ಅನ್ವಯ ನಾನು ಸಲ್ಲಿಸಿರುವ ಆರ್ ಟಿ ಸಿ ಪ್ರತಿಯು ಅನುರ್ಜಿತ ಎಂದರೆ ಸರಿಯಲ್ಲ. ಆರ್ ಟಿ ಸಿ 2000-2001 ಹಾಗೂ ಎಂ ಆರ್ 1/2000-2015 ಇದನ್ನು ಹಾಜರು ಪಡಿಸಿದ್ದು ಇವುಗಳು ಅನಧಿಕೃತವಾಗಿದ್ದು ನಮಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

3. ನನ್ನ ತಾಯಿ ಕೃಷ್ಣೆಗೌಡರ ವಿರುದ್ದ ಓ ಎಸ್ ನಂ.83/2004 ಇದೇ ನ್ಯಾಯಾಲಯದಲ್ಲಿ ದಾವೆ

ಹಾಕಿರುತ್ತಾರೆ ಎಂದರೆ ಸರಿ. ಸದರಿ ದಾವೆಯು ನನ್ನ ತಾಯಿ ಹಾಜರಾಗದೇ ಇದ್ದ ಕಾರಣ dismis ಆಗಿರುತ್ತದೆ. ನಾವು ಸುಳ್ಳು ದಾವೆ ಹಾಕಿದ್ದು ಯಾವುದೇ ದಾಖಲಾತಿಗಳು ಇಲ್ಲದೇ ಇದ್ದ ಕಾರಣ ಸದರಿ ದಾವೆ ವಜಾವಾಗಿರುತ್ತದೆ ಎಂದರೆ ಸರಿಯಲ್ಲ.

4. ಕೃಷ್ಣೆಗೌಡರ ವಿರುದ್ದ ಇದೇ ರೀತಿ ರೆವಿನ್ಯೂ ನ್ಯಾಯಾಲಯದಲ್ಲಿ ನನ್ನ ತಾಯಿ ಒಂದು ಪ್ರಕರಣ ದಾಖಲು ಮಾಡಿದ್ದು ಅದು ನಿಪಿ-9 ಎಂದರೆ ಸರಿ. ಸದರಿ ಪ್ರಕರಣವು ನಮ್ಮ ವಿರುದ್ದ ಆಗಿದ್ದು ಅದು ಕೃಷ್ಣೆಗೌಡರ ಪರ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಆದೇಶದ ದಾಖಲಾತಿಯನ್ನು ಹಾಜರು ಪಡಿಸುವಲ್ಲಿ ನನಗೆ ಯಾವುದೇ ಆಡಚಣೆ ಇಲ್ಲ. ಅದೇ ರೀತಿ 2016 ರಿಂದ ಇಲ್ಲಿಯವರೆಗೂ ಕೃಷ್ಣೆಗೌಡರ ಹೆಸರಿನಲ್ಲಿ ಆರ್ ಟಿ ಸಿ ಬರುತ್ತಿದೆ ಎಂದರೆ ಸಾಕ್ಷಿಯು ಹೌದು ಆದರೆ ಅದನ್ನು cancel ಮಾಡಬೇಕೆಂದು ದಾವೆ ಹಾಕಿರುತ್ತೇವೆ ಎಂದು ನುಡಿಯುತ್ತಾರೆ.

5. ನಿಪಿ-4 ರಲ್ಲಿ ಕಾಲಂ ನಂ.9 ರಲ್ಲಿ ಯಾರು ಸ್ವಾ ಧೀನದಲ್ಲಿ ಇದ್ದಾರೆ ಎಂಬುದಕ್ಕೆ ಯಾವುದೇ ಹೆಸರು ಬಂದಿರುವುದಿಲ್ಲ ಎಂದರೆ ಸರಿ. ಆದರೆ ವ್ಯವಸಾಯದಾರರ ಹೆಸರು ನನ್ನ ತಂದೆ ಹಾಗೂ ತಾತನ ಹೆಸರು ನಮೂದಾಗಿರುತ್ತದೆ ಎಂದು ನುಡಿಯುತ್ತಾರೆ. ನಾನು ಸಲ್ಲಿಸಿರುವ ಎಲ್ಲಾ ದಾಖಾಲಾತಿಗಳು ಸೃಷ್ಟಿ ಮಾಡಿದ್ದು ಕೇವಲ ದಾವೆಗೆ ಅನುಕೂಲವಾಗಲಿ ಎಂದು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ಅದೇ ರೀತಿ ಸರ್ವೆ ಸ್ಕೆಚ್ ಹಾಗೂ ಕಂದಾಯ ದಾಖಲಾತಿಗಳು ಕೂಡ ಸೃಷ್ಟಿ ಮಾಡಿರುವ ದಾಖಲೆಗಳು ಎಂದರೆ ಸರಿಯಲ್ಲ.

6. ನಿಪಿ-8 ರ ಪ್ರಕಾರ ನನಗೆ ಪೋಲೀಸರಿಂದ ನೋಟೀಸು ಬಂದಾಗ ನಾನು ಹಾಜರಾಗಿ ದಾಖಲಾತಿಯನ್ನು ಸಲ್ಲಿಸಿರುತ್ತೇನೆ. ಕೃಷ್ಣೆಗೌಡರು ಸದರಿ ದಾವಾ ಆಸ್ತಿಯಲ್ಲಿ ಸ್ವಾ ಧೀನದಲ್ಲಿ ಇದ್ದ ಕಾರಣ ನಾನು ಪೋಲೀಸರಿಗೆ ದೂರು ನೀಡಿದ ಮೇರೆಗೆ ನಿಪಿ-8 ನೀಡಲಾಗಿದ್ದು ಎಂದರೆ ಸಾಕ್ಷಿಯು ಸ್ವಾ ಧೀನದಲ್ಲಿ ನಾವು ಇದ್ದೆವು  ಎಂದು ನುಡಿಯುತ್ತಾರೆ. ನಿಪಿ-11 ರ ಪ್ರಕಾರ ಕೃಷ್ಣ ರವರ ಹೆಸರಿನಲ್ಲಿ ಎಂ ಆರ್ ಆಗಿರುತ್ತದೆ ಎಂದರೆ ಸಾಕ್ಷಿಯು ಅದನ್ನು ರದ್ದು ಪಡಿಸಲು ನಾನು ದಾವಾ ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ಇದರ ವಿರುದ್ದ ನಾನು ಮೇಲ್ಮನವಿಗಳನ್ನು ಸಲ್ಲಿಸಿದ್ದು

ಅಲ್ಲಿಯೂ ಕೂಡ ಕೃಷ್ಣ ರವರ ಪರವಾಗಿ ಆದೇಶ ಆಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-12 ರ ಪ್ರಕಾರ ಕೃಷ್ಣೆಗೌಡರೇ ಸ್ವಾಧೀನದಲ್ಲಿ ಇರುವ ಬಗ್ಗೆ ನಮೂದಾಗಿರುತ್ತದೆ ಎಂದರೆ ಸಾಕ್ಷಿಯು ಅನುಭವದಲ್ಲಿ ನಾವೇ ಇರುತ್ತೇವೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗೆ ಸಂಬಂಧಿಸಿದಂತೆ ನಮ್ಮ ಹೆಸರಿನಲ್ಲಿ ಯಾವುದೇ ಕ್ರಯಪತ್ರ ಅಥವಾ ರೆವಿನ್ಯೂ ದಾಖಲಾತಿಗಳು ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನನ್ನ ಅಣ್ಣ ಅಥವಾ ತಮ್ಮ ಅಲ್ಲ ಎಂದರೆ ಸರಿ. ನನಗೂ ಅವರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ಆದ್ದರಿಂದ ನಾನು ಅವರ ವಿರುದ್ದ ದಾವೆ ಹಾಕಿರುವುದು ಸರಿಯಲ್ಲ ಎಂದರೆ ಸಾಕ್ಷಿಯು ನನ್ನ ಜಮೀನು ನಮ್ಮ ಹೆಸರಿಗೆ ಬರಬೇಕೆಂದು ದಾವೆ ಹಾಕಿರುತ್ತೇನೆ ಎಂದು ನುಡಿಯುತ್ತಾರೆ.

7. ಸರ್ವೆ ನಂ.106 ಪ್ರತಿವಾದಿಯ ದಾಯಾದಿಗೆ ಸಂಬಂಧಿಸಿದ ಆಸ್ತಿ ಆಗಿರಬಹುದು ನನಗೆ ಗೊತ್ತಿಲ್ಲ. ನಿಪಿ-2 ರಲ್ಲಿ ನಮೂದಾಗಿರುವ ಸರ್ವೆ ನಂಬರ್ ಗಳ ಮಾಲೀಕರ ಹೆಸರಿನ ಬಗ್ಗೆ ನನಗೆ ತಕರಾರು ಇರುವುದಿಲ್ಲ ಇದರ ಮಧ್ಯೆ ನನ್ನ ಜಮೀನು ಇರುತ್ತದೆ ಎಂಬ ಬಗ್ಗೆ ನಾನು ದಾಖಲೆ ಸಲ್ಲಿಸಿರುತ್ತೇನೆ. ಕೃಷ್ಣೆಗೌಡ, ಪ್ರೇಮಮ್ಮ, ದೊಡ್ಡಲಿಂಗೇಗೌಡ, ಕರಿಗೌಡ ಇವರುಗಳನ್ನು ನಾವು ಸ್ವಾಧೀನದಲ್ಲಿ ಇರುವ ಬಗ್ಗೆ ಸಾಕ್ಷಿ ನುಡಿಸಲು ನನಗೆ ಯಾವುದೇ ತಕರಾರು ಇರುವುದಿಲ್ಲ. ಸಾಕ್ಷಿಯು ಮುಂದುವರಿದು ಪ್ರೇವಮ್ಮ ಮತ್ತು ದೊಡ್ಡಲಿಂಗೇಗೌಡ ತೀರಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ದೊಡ್ಡಲಿಂಗೇಗೌಡ ಬಿನ್ ಕರಿಗೌಡ ಇವರು ಪ್ರತಿವಾದಿಯ ಅಣ್ಣ ಎಂದರೆ ಸರಿ. ಸರ್ವೆ ನಂ.106 ರಲ್ಲಿ ಸದರಿಯವರು ಇರುತ್ತಾರೆ ಎಂದರೆ ಸರಿ. ನಿಪಿ-2 106 ಕ್ಕೆ ಸಂಬಂಧಿಸಿದ ದಾಖಲಾತಿ ಎಂದರೆ ಸರಿಯಲ್ಲ. ಅದು ದಾವಾ ಆಸ್ತಿಗೆ ಸಂಬಂಧಿಸಿದ ದಾಖಲೆ ಎಂದು ನುಡಿಯುತ್ತಾರೆ.

8. ದಾವಾ ಆಸ್ತಿಯಲ್ಲಿ ಪ್ರತಿವಾದಿಯು ಸ್ವಾಧೀನದಲ್ಲಿ ಇದ್ದರೂ ಸಹಿತ ರೆವಿನ್ಯೂ ಅಧಿಕಾರಿಗಳೊಂದಿಗೆ ಶಾಮೀಲಾಗಿ ನಾನು ನನ್ನ ತಾಯಿಯ ಹೆಸರಿನಲ್ಲಿ ಎಂ ಆರ್ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಪಡ restore ಗಾಗಿ ಕೃಷ್ಣೆಗೌಡರೇ ಕಂದಾಯ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ನಾವೇ ಪಾವತಿ ಮಾಡಿದ್ದು ಅದನ್ನು

ನ್ಯಾಯಾಲಯಕ್ಕೆ ಈಗಾಗಲೇ ಸಲ್ಲಿಸಿರುತ್ತೇವೆ ಎಂದು ನುಡಿಯತ್ತಾರೆ. ದಿನಾಂಕ 27.04.2001 ರಲ್ಲಿ ಕೃಷ್ಣೆಗೌಡರು ಪಡ restore ಗಾಗಿ ಅರ್ಜಿ ಸಲ್ಲಿಸಿ ಶುಲ್ಕವನ್ನು ಸಹ ಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಖಾತೆ ಪಹಣಿಯನ್ನು ಸೃಷ್ಟಿ ಮಾಡಿಕೊಂಡಿದ್ದು ನಮಗೆ ಯಾವುದೇ ಮಾಲೀಕತ್ವ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಹಾಗೂ ಅವರ ತಂದೆ ಇಂದಿಗೂ ಸಹಿತ ದಾವಾ ಆಸ್ತಿಯಲ್ಲಿ ವ್ಯವಸಾಯ ಮಾಡಿಕೊಂಡು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. 1950 ರಿಂದ ಇಲ್ಲಿಯವರೆಗೂ ಕೃಷ್ಣೆಗೌಡರ ವಂಶಸ್ಥರೇ ದಾವಾ ಆಸ್ತಿಯ ಸ್ವಾಧೀನದಲ್ಲಿದ್ದು ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

**ಮೊದಲನೇ ಅಪರ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆಎಂಎಫ್‌ಸಿ, ಕನಕಪುರ**